ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ01/2015-16 ದಿನಾಂಕ: 05-12-2015

## ಜ್ಞಾಪನ

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್‌ಗಳಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಿದ ಆನ್‌ಲೈನ್ ತಂತ್ರಾಂಶ ಹಾಗೂ ಪ್ರತಿನಿತ್ಯ ಉಪಯೋಗಿಸುವ ತಂತ್ರಾಂಶಗಳ ಬಗ್ಗೆ ತರಬೇತಿ ಕಾರ್ಯಕ್ರಮದ ಬಗ್ಗೆ.

**ಉಲ್ಲೇಖ:** ದಿನಾಂಕ: 04-12-2015 ರಂದು ಶಿಕ್ಷಣ ಆಯುಕ್ತರು ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ಹಾಗೂ ಪ್ರೋಗ್ರಾಮರ್‌ಗಳ ಸಭೆಯಲ್ಲಿ ಸೂಚಿಸಿದಂತೆ.

1. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಲವಾರು ಆನ್‌ಲೈನ್ ತಂತ್ರಾಂಶಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು, ದಿನನಿತ್ಯ ಉಪಯೋಗಿಸುವ ತಂತ್ರಾಂಶಗಳನ್ನು ಉಪಯೋಗಿಸುವ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಈಗಾಗಲೇ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ಜಿಲ್ಲಾ ಪ್ರೋಗ್ರಾಮರ್ ಜೊತೆಗೆ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.
2. ಈ ತರಬೇತಿ ಕಾರ್ಯಕ್ರಮದಲ್ಲಿ ಈ ಕೆಳಗೆ ನಮೂದಿಸಿದ ತಂತ್ರಾಂಶದ ಬಗ್ಗೆ ತರಬೇತಿಯನ್ನು ನೀಡಲಾಗುವುದು.
3. ತರಬೇತಿ ಪಡೆದ ನಂತರ ಸಂಬಂಧಿಸಿದ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್‌ಗಳು ಸದರಿ ತಂತ್ರಾಂಶ ತರಬೇತಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಕ್ರಮವಹಿಸಲು ಈ ಮೂಲಕ ಸೂಚಿಸಲಾಗಿದೆ.

   1. ಸಚಿವಾಲಯವಾಹಿನಿ (ಪತ್ರ ಹಾಗೂ ಕಡತ ನಿರ್ವಹಣೆ ತಂತ್ರಾಂಶ)
   2. ಮಾನ್ಯ ಮುಖ್ಯ ಮಂತ್ರಿಗಳ ಜನತಾ ದರ್ಶನ/ ಇ-ಜನಸ್ಪಂದನದಲ್ಲಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ಕುರಿತು ನಿರ್ವಹಣೆ.
   3. ಆರ್.ಟಿ.ಇ. (Right to Education)
   4. ಹೆಚ್.ಆರ್.ಎಂ.ಎಸ್. (Human Resource Management System)
   5. ಹೊಸ ಶಾಲೆಗಳನ್ನು ಪ್ರಾರಂಭಿಸಲು ತಯಾರಿಸಿದ ತಂತ್ರಾಂಶ (1-5, 6-8, 9-10 ತರಗತಿಗಳಿಗೆ)
   6. ಎಲ್ಲಾ ಇನ್ನುಳಿದ ತಂತ್ರಾಂಶಗಳು

| ಕ್ರ ಸಂ | ವಿಭಾಗ | ದಿನಾಂಕ |
|---|---|---|
| 1 | ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್ | 10-12-2015 ಹಾಗೂ 11-12-2015 |
| 2. | ಧಾರವಾಡ ಹಾಗೂ ಗುಲ್ಬರ್ಗಾ ವಿಭಾಗದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್ | 14-12-2015 ಹಾಗೂ 15-12-2015 |

ಸದರಿ ದಿನಾಂಕಗಳಂದು ತರಬೇತಿಗೆ ಶಿಕ್ಷಕರ ಸದನ, 2ನೇ ಮಹಡಿ ಬೆಂಗಳೂರು ಇಲ್ಲಿ ಹಾಜರಾಗುವಂತೆ ಸೂಚಿಸಲಾಗಿದೆ.

5/12/15

**ಆಯುಕ್ತರು**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ,**

**ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.**